ವಿಷಯ : ಮುಜರಾಯಿ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುವ ಪ್ರಥಮದರ್ಜೆ ಗುಮಾಸ್ತರ ಮುಂಬಡ್ತಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :402 (762)

ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೆನರಸಿಪುರ) : ಮಾನ್ಯ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 10 ವರ್ಷಗಳಿಂದ ಮುಜರಾಯಿ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎಷ್ಟು ಜನ ಪ್ರಥಮ ದರ್ಜೆ ಗುಮಾಸ್ತರಿಗೆ ಮುಂಬಡ್ತಿಯನ್ನು ನೀಡಲಾಗಿದೆ. (ವರ್ಷಾವಾರು ವಿವರಗಳನ್ನು ನೀಡುವುದು)

ಆ) ಈ ರೀತಿ ಬಡ್ತಿ ಹೊಂದಿರುವವರ ಪೈಕಿ ಎಷ್ಟು ಜನ ಬೆಂಗಳೂರಿನಲ್ಲಿ ಕಳೆದ 5 ವರ್ಷಗಳಿಂದ ನಿರಂತರವಾಗಿ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ?

ಇ) ಇವರುಗಳನ್ನು ವರ್ಗಾವಣೆ ಮಾಡದೆ ಇರಲು ಕಾರಣಗಳೇನು?

ಈ) ಹಾಲಿ ಎಷ್ಟು ಅಧೀಕ್ಷಕರ ಹುದ್ದೆಗಳು ಖಾಲಿ ಇದೆ?

ಉ) ಈ ಹುದ್ದೆಗಳನ್ನು ಬಡ್ತಿ ಮಾಡದೇ ಇರಲು ಕಾರಣಗಳೇನು?

ಊ) ಈ ಎಲ್ಲಾ ಅಧೀಕ್ಷಕರ ಹುದ್ದೆಗಳನ್ನು ಬಡ್ತಿ ಮಾಡಲು ಸರ್ಕಾರ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಮುಜರಾಯಿ ಸಚಿವರು) :

ಅ) ಒಟ್ಟು 49 ಜನ

1984	1985	1986	1987	1988
ಇಲ್ಲ	ಇಲ್ಲ	7	5	3
1989	1990	1991	1992	1993
12	5	-	15	2

ಆ) ಯಾರು ಇಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಈ) 5 ಹುದ್ದೆಗಳು

ಊ)ಹಾಲಿ ಅರ್ಹರಾದ ಪ್ರಥಮ ದರ್ಜೆ ಸಹಾಯಕರಿಗೆ ಬಡ್ತಿ ನೀಡುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಊ)ಹೌದು.

ವಿಷಯ : ಸೋಮವಾರ ಪೇಟೆ ತಾಲ್ಲೂಕಿನಲ್ಲಿ ಆರ್.ಇ.ಎಸ್. ಸ್ಕೀಂನಲ್ಲಿ ವಿದ್ಯುದ್ಧೀಕರಣಗೊಳಿಸುವ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 404 (42)

ಶ್ರೀ ಎ.ಎಂ. ಬೆಳ್ಳಿಯಪ್ಪ (ಸೋಮವಾರಪೇಟೆ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸೋಮವಾರ ಪೇಟೆ ತಾಲ್ಲೂಕಿಗೆ ಕುಮಾರಹಳ್ಳಿ, ಕೊತ್ತನಹಳ್ಳಿ, ಚಿಪ್ಕನ ಹಳ್ಳಿಸೂಲನಬ್ಬಿ ಗರ್ವಾಲ್, ಹೇರೂರು ಗ್ರಾಮಗಳಿಗೆ ಆರ್.ಇ.ಎಸ್. ಸ್ಕೀಂನಲ್ಲಿ ವಿದ್ಯುತ್ ಸೌಲಭ್ಯ ಕಲ್ಪಿಸುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ,ಈ ಗ್ರಾಮಗಳಿಗೆ ಯಾವಾಗ ವಿದ್ಯುಚ್ಛಕ್ತಿ ಸೌಕರ್ಯವನ್ನು ಕಲ್ಪಿಸಲಾಗುವುದು?

ಶ್ರೀ ವಿ. ಮುನಿಯಪ್ಪ (ಇಂಧನ ರಾಜ್ಯ ಸಚಿವರು) :

ಅ) ಹೌದು.

ಆ) ಆದಷ್ಟು ಶೀಘ್ರವಾಗಿ ವಿದ್ಯುಚ್ಛಕ್ತಿ ಸೌಕರ್ಯ ಕಲ್ಪಿಸಲಾಗುವುದು.

ವಿಷಯ : ಹುಕ್ಕೇರಿ ತಾಲ್ಲೂಕಿನ ಬಡಕುಂದ್ರಿ ಸೇತುವೆಯನ್ನು ಎತ್ತರಗೊಳಿಸುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 405 (122)

ಶ್ರೀ ಉಮೇಶ್ ವಿ. ಕತ್ತಿ (ಹುಕ್ಕೇರಿ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಕ್ಕೇರಿ-ಹತ್ತರಕಿ ಪಟ್ಟಣಗಳನ್ನು ಸೇರಿಸುವ ರಸ್ತೆ ಜಿಲ್ಲಾ ಮುಖ್ಯ ರಸ್ತೆಯಾಗಿರುವುದು ನಿಜವೇ

ಆ) ಕಳೆದ 2 ತಿಂಗಳಿಂದ ಸುರಿಯುತ್ತಿರುವ ಧಾರಕಾರ ಮಳೆಯಿಂದ ಹಿರಣ್ಯಕೇಶಿ ನದಿಯ ಮಹಾಪೂರದಿಂದ ಬಡಕುಂದ್ರಿ ಕೆಳಮಟ್ಟದ ಸೇತುವೆ ಮುಚ್ಚಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ